Reg No M 1229 42nd Year Sri "Satyavadi" Mysore 9—1—1958

ಸತ್ಯವಾದಿ

ಬಿಡಿ ಪ್ರತಿ 3 ಪೈ | ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಾಯರು

ಷೇಕ್ ಅಬ್ದುಲ್ಲರ ಬಿಡುಗಡೆ

ಶ್ರೀನಗರ 8— ಷೇಕ್ ಅಬ್ದುಲ್ಲಾರವರು ಸ್ಥಾನಬದ್ಧತೆಯಿಂದ ಈ ಸಂಜೆ 5 ಗಂಟೆಗೆ ಕುಡ್‌ನಲ್ಲಿ ಬಿಡುಗಡೆ ಮಾಡಲ್ಪಟ್ಟರು — ಅವರನ್ನು ಶ್ರೀನಗರಕ್ಕೆ ಬಿಡಲು ಕಾರು ಕಳಿಸಲಾಗಿತ್ತು. ಈ ದಿನ ನಾನು ಶ್ರೀನಗರಕ್ಕೆ ತೆರಳಲು ಇಚ್ಛಿಸುವದಿಲ್ಲ ಆದರೆ ಕಾರನ್ನು ಇಲ್ಲೇ ಬಿಟ್ಟುಹೋಗಿ ಎಂದು ಅವರು ಅಧಿಕಾರಿಗಳಿಗೆ ತಿಳಿಸಿದರು ಕಾರುಗಳು ಸರ್ಕಾರದ ಆಸ್ತಿಯಾದ್ದರಿಂದ ಅಧಿಕಾರಿಗಳು ಬಿಡಲೊಪ್ಪದೆ ಅವರಿಗೆ ಮತ್ತು ಅವರ ಸಂಗಡ ಬಿಡುಗಡೆ ಆದ ಮತ್ತಿಬ್ಬರಿಗೆ ತಲಾ ರೂ 100 ಕೊಟ್ಟರು

ನಾನೂರು ಅಂಗಡಿಗಳ ಭಸ್ಮ

ಪಿಲಾಂಗ್ 8— ಪಿಲಾಂಗಿನ ಮುಖ್ಯ ವ್ಯಾಪಾರಸ್ಥಳವಾದ ಸೋಡಲು ರಮಣೀಯವಾದ ಬುರಾ ಬಜಾರಿಗೆ ಬೆಂಕಿ ಬಿದ್ದು 400 ಅಂಗಡಿಗಳು ಅಗ್ನಿನಾರಾಯಣನಿಗೆ ಆಹುತಿಯಾಗಿ 5 ಲಕ್ಷ ರೂಗಳಷ್ಟು ನಷ್ಟವಾಗಿದೆ

ಬಡಿಸುತ್ತಿದ್ದಾಗ ಸಾವು

ಭದ್ರಾವತಿ 6— ಇಲ್ಲಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ನಿವೃತ್ತ ನೌಕರ ಭೀಮರಾಯರ ಪತ್ನಿ 52 ವರ್ಷದ ಸುಬ್ಬಮ್ಮನವರು, ಮನೆಗೆ ಆಗಮಿಸಿದ್ದ ಅತಿಥಿಗಳಿಗೆ ಬಡಿಸುತ್ತಿದ್ದಾಗ ಕೈಸೆದು ಮರಣ ಹೊಂದಿದರು ಎಂದು ಅವರ ಮೊನ್ನಗಳ ಹುಟ್ಟುಹಬ್ಬ

ಪಾಕ್‌ನವರಿಂದ ಗುಂಡು

ಪಿಲಾಂಗ್ 6— ಫಿಸ್ಸಾಮಿನ ಪೂರ್ವ ಪಾಕಿಸ್ತಾನ ಗಡಿಯಲ್ಲಿ ದಾಪ್ಕಿ ಹತ್ತಿರ ಭಾರತೀಯ ರಾಷ್ಟ್ರೀಯರಿದ್ದ ಒಂದು ದೋಣಿಯು ಮೇಲೆ ಪಾಕಿಸ್ತಾನ ಪೋಲೀಸರು ಗುಂಡು ಹಾರಿಸಿದರು ; ಕೆಲವರು ಗಾಯಗೊಂಡರು.

ಶಶಾಯುಷಿಯ ಸಾವು

ತಿರುನಲ್ವೇಲಿ 7— ಕಿಲಾಪುಲಿಯೂರಿನ ಕುಲಂದೇವರು ತೇವಾರಂ ಪಂಡಿತನ್ನ 101 ನೇ ವಯಸ್ಸಿನಲ್ಲಿ ಕಾಲವಾದನು : ಈತನ ಸಂಸಾರ 9 ಮಂದಿಯನ್ನುಳ್ಳದ್ದಾಗಿದೆ ; 8 ಮಂದಿ ಪುತ್ರರು, 6 ಮಂದಿ ಪುತ್ರಿಯರು : 65 ಮಂದಿ ಮೊಮ್ಮಕ್ಕಳು, 12 ಮಂದಿ ಪರಿವುಕ್ಕಳು.

ಅಗ್ನಿ ಅನಾಹುತ

ಹೊನ್ನಾಳಿ 6 — ತಿಮ್ಮಲಾಪುರ ಗ್ರಾಮದಲ್ಲಿ ಬುಧವಾರ ಆದ ಅಗ್ನಿ ಆಕಸ್ಮಿಕದಿಂದ 7 ಸಾವಿರ ರೂಗಳ ಆಸ್ತಿ ನಷ್ಟವಾಯಿತು.

ಸಾಹಿತ್ಯ ಸಮ್ಮೇಳನ

ಬಳ್ಳಾರಿ 7— ಇಲ್ಲಿ ತಾ|| 15 ರಿಂದ ನಡೆಯುವ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ವೈಭವವಾಗಿ ನಡೆಸಲು ಏರ್ಪಾಡುಗಳು ನಡೆಯುತ್ತಿವೆ — ಸಮ್ಮೇಳನಕ್ಕಾಗಿ ಭವ್ಯ ಚಪ್ಪರ ನಿರ್ಮಿಸಲಾಗುತ್ತಿದೆ — ಸಮ್ಮೇಳನವನ್ನು ವೈಸೂರು ಗೌರ್ನರು ಉದ್ಘಾಟಿಸುವರು.

ಹೊಟ್ಟೆಯಲ್ಲಿ ನಾಣ್ಯ ಮುಂತಾದವು

ಸೆಡ್ಜ್‌ಫೀಲ್ಡ್— ಆಹಾರೇಚ್ಛೆಯಿಲ್ಲದಿದ್ದ ಒಬ್ಬ ಮನುಷ್ಯನ ಹೊಟ್ಟೆಯನ್ನು ಅಪರೇಷನ್ ಮಾಡಿ ಅದರಲ್ಲಿದ್ದ 424 ನಾಣ್ಯಗಳನ್ನೂ 27 ತಾಮ್ರ ಚೂರುಗಳನ್ನೂ ವೈದ್ಯರು ಈಚೆಗೆ ತೆಗೆದರು ; ಅವೆಲ್ಲದಂ ಜೊತೆ ಕೂಡ ಐದೂವರೆ ಪೌಂಡು ಗಳಿದ್ದವು ; ಇದೊಂದು ಮಾನವ ಹಣದ ಪೆಟ್ಟಿಗೆ ಎ ದಿಯವರು ; ಈ ನಾಣ್ಯಗಳೆಲ್ಲ ಅವನಿಗೆ ಕೊಡಲ್ಪಡುವದಿಲ್ಲವೆಂದೂ ಸರ್ಕಾರಕ್ಕೆ ಸೇರಿಸಲ್ಪಡುವದೆಂದೂ ಹೇಳಿದವರು — ಈಗ ಆ ಮನುಷ್ಯ ಚೆನ್ನಾಗಿ ಊಟಮಾಡುತ್ತಿದ್ದಾನೆ.

ಡಿ. ಎಂ. ಕೆ. ನಾಯಕರ ಮೇಲೆ ಚಾರ್ಜ್‌ಷೀಟ್

ಮದರಾಸು 8 — ದ್ರವಿಡ ಮುನ್ನೇತ್ರ ಕಜಗಂ ನಾಯಕ ಶ್ರೀ ಸಿ. ಎನ್. ಅಣ್ಣಾದೊರೆ ಮತ್ತಿತರ 10 ಜನ ನಾಯಕರು ಬಿಡುಗಡೆ ಆದರು. ಮೆಂವಣಿಗೆಯ ಮೇಲೆ ಪೋಲೀಸರು ವಿಧಿಸಿದ್ದ ನಿಶೇಧವನ್ನು ಈ ತಿಂಗಳು 3 ನೇ ತಾ|| ಇವರು ಭಂಗಮಾಡಿದರೆಂದು ಪೋಲೀಸರು ಚಾರ್ಜ್‌ಷೀಟು ಹಾಕಿರುವರು

ಬ್ರಿಟ್ ಪ್ರಧಾನಿಯೊಡನೆ ಚರ್ಚೆ

ನವ ದೆಹಲಿ 8 — ಪಂ|| ನೆಹರುರವರ ಗೃಹದಲ್ಲಿ ಈ ದಿನ ಪಂ|| ನೆಹರುರವರು ಬ್ರಿಟಿಷ್ ಪ್ರಧಾನಿ ಮೆಕ್ಮಿಲ್ಲರೊಡನೆ ಅಂತರ್ರಾಷ್ಟ್ರೀಯ ಪರಿಸ್ಥಿತಿ ಕುರಿತ ಪರ್ಯಾಲೋಚನೆಯನ್ನು ಪ್ರಾರಂಭಿಸಿದರು — ಅಲ್ಲೇ ಊರ್ವರೂ ಊಟ ಹಾರ ಮಾಡಿದರು.

ವಿದ್ಯಾರ್ಥಿಗಳಿಂದ ಪ್ರಿನ್ಸಿಪಾಲರ ಬಂಧನ

ಬೇರೆಲ್ಲಿ 8— ಬೆರೆಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಕಾಲೇಜಿಗೆ ಚಕ್ಕರ್ ಹಾಕಿ, ಪ್ರಿನ್ಸಿಪಾಲರನ್ನೂ ಇತರ ಕೆಲವು ಮಂದಿ ಉಪಾಧ್ಯಾಯರನ್ನೂ ಪ್ರಿನ್ಸಿಪಾಲರ ಕೊಠಡಿಯಲ್ಲಿ ನಿನ್ನೇ ಕೂಡಿಹಾಕಿ ಬೀಗ ಹಾಕಿದ್ದರು — ಅದಕ್ಕೆ ಮುಂಚೆ ವಿದ್ಯಾರ್ಥಿಗಳು ಪ್ರಿನ್ಸಿಪಾಲರಿಗೆ ಒಂದು ಕೇಳಿಕೆ ಪತ್ರ ಅರ್ಪಿಸಲು ಅದನ್ನು ಪ್ರಿನ್ಸಿಪಾಲರು ತಿರಸ್ಕರಿಸಿದ್ದರು.

ಕ್ಯಾಲೆಂಡರು ಸ್ವೀಕಾರ

ಬೊಂಬಾಯಿನಲ್ಲಿರುವ ಯುನೈಟೆಡ್ ಸ್ಟೇಟ್ಸ್ ಇಂಫರ್ಮೇಷನ್ ಸರ್ವಿಸ್‌ನವರು ಕಳುಹಿಸಿರುವ ಸಂದರ್ಭೋಚಿತವಾದ ಕ್ಯಾಲೆಂಡರನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ್ದೇವೆ

— —

ತುಮಕೂರು 5— ಸ್ಥಳೀಯ ಮುನಿಸಿಪಾಲಿಟಿಯು ಗುಡಿಸುವವರು, ಮಂಗಳವಾರ ಮುನಿಸಿಪಲ್ ಕೌನ್ಸಿಲ್ಲಿನ ವಿಶೇಷ ಸಭೆಯಲ್ಲಿ ಮಾಡಿದ್ದಾಗ ಅಲ್ಲಿಗೆ ಹೋಗಿ ತಮ್ಮ ವೇತನ ಹೆಚ್ಚಿಸುವ ಬಗ್ಗೆ ವಿನಂತಿ ಮಾಡಿದರು ; ಸಂಬಳ ಹೆಚ್ಚಿಸಲಾಗಿದ್ದು ಸ್ಯಾಂಕ್ಷನ್ನಿಗಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆಯೆಂದು ಅಧ್ಯಕ್ಷರು ತಿಳಿಸಿದರು.

ಬೆಂಗಳೂರು 8— 1946 ರ ನವೆಂಬರು 16 ರಲ್ಲಿ ಹೊರಡಿಸಿದ 1958 ರ ಮೈಸೂರು ಸರ್ಕಾರಿ ಶಾಸನವನ್ನು ಬಡ್ತಿ ಸಮೇತ ಈ ಜನವರಿ 25 ರಂದು ವಾಪಸ್ಸು ಮಾಡಲಾಗುವುದೆಂದು ಪ್ರಕಟಿಸಲಾಗಿದೆ.

ಸುದ್ದಿಗಳು

ಡೆಟ್ರಾಯಿಟ್ 5— ಅಮೇರಿಕಾದ ಪ್ರತಿ ಮೂರು ಸಂಸಾರಂಗಳಲ್ಲಿ ಒಂದು ಸಂಸಾರವು ಮೋಟಾರು ಕಾರನ್ನು ಪಡೆದಿದೆ : ಅಮೇರಿಕಾದಲ್ಲಿ 56101000 ಕಾರುಗಳು ಉಪಯೋಗಿಸಲ್ಪಡುತ್ತಿವೆ.

ನವದೆಹಲಿ 8— ಸೂಡಾನಿನ ರಾಜಧಾನಿಯಾದ ಖಾರ್ಟೂಮಿನಲ್ಲಿ ವಾರ್ಷಿಕ ತಿಂಗಳ ಮಧ್ಯಭಾಗದಿಂದ 15 ದಿವಸಗಳವಂಗೆ ಭಾರತೀಯ ವಾಣಿಜ್ಯ ವಸ್ತುಪ್ರದರ್ಶನವೊಂದನ್ನು ವ್ಯವಸ್ಥೆಗೊಳಿಸಲಾಗುವುದು.

ಕಾಶ್ಮೀರದಲ್ಲಿ ಪ್ರಜೆಗಳು ಸ್ವಂತಕ್ಕೆ ಅವಶ್ಯಕವಾದುದಕ್ಕಿಂತ ಹೆಚ್ಚಾದ ಭತ್ತ ಮತ್ತು ಅಕ್ಕಿಯನ್ನು ಸರ್ಕಾರಕ್ಕೆ ಕೊಡಬೇಕೆಂದು ಪ್ರಕಟಿಸಲಾಗಿದೆ.

ಈ ವರ್ಷ ಅಮೇರಿಕಾದ ವಿಶ್ವ ವಿದ್ಯಾನಿಲಯಗಳಲ್ಲಿ 750000 ವಿದ್ಯಾರ್ಥಿಗಳು ಪ್ರವೇಶ ಪಡೆದರು.

ಮೈಸೂರು ನಗರದಲ್ಲಿ ಸಿಡುಬು ಸಾಂಕ್ರಾಮಿಕ

ಪ್ರತಿಯೊಬ್ಬರೂ ದೇವಿ ಹಾಕಿಸಿಕೊಳ್ಳಬೇಕೆಂದು ಮೈಸೂರು ಪೌರಸಭೆ ಹೆಲ್ತ್ ಆಫೀಸರ್ ಮನವಿ

ಮೈಸೂರು ನಗರದ ನಾನಾ ಭಾಗಗಳಿಂದ ಸಿಡುಬು ಸಾಂಕ್ರಾಮಿಕ ವರದಿ ಆಗುತ್ತಿದೆ ಎಲ್ಲ ಅಗತ್ಯ ಮುನ್ನೆಚ್ಚರಿಕ್ರಮಗಳನ್ನು ಕೈಗೊಳ್ಳಲಾಗಿದೆ ಮತ್ತು ಸಾಮೂಹಿಕ ದೇವಿ ಹಾಕುವುದು ಮುಂದುವರಿಯುತ್ತಿದೆ ರೋಗ ಎಂಬುದ್ದ ಈವರಗೆ 90 ಸಾವಿರ ದೇವಿ ಹಾಕಿದೆ.

ರೋಗವನ್ನು ಸಂಪೂರ್ಣವಾಗಿ ತಪ್ಪಿಸಲು ಪ್ರತಿ ಸಣ್ಣವರು ದೊಡ್ಡವರು ದೇವಿ ಹಾಕಿಸಿಕೊಳ್ಳುವುದರ ಮೂಲಕ ರಕ್ಷಿಸಿಕೊಳ್ಳಬೇಕು.

ದೇವಿ ಹಾಕುವ ಉದ್ದೇಶದಿಂದ ಹೆಲ್ತ್ ಇನ್ಸ್‌ಪೆಕ್ಟರರು ಮನೆಮನೆಗೂ ಭೇಟಿಕೊಡುವರು. ರೋಗದೊಡನೆ ಯಶಸ್ವಿಯಾಗಿ ಹೋರಾಡಲು ಪ್ರತಿಯೊಬ್ಬರೂ ದೇವಿ ಹಾಕಿಸಿಕೊಳ್ಳಬೇಕೆಂದು ಕೋರಲಾಗಿದೆ.

— ಎಂದು ಪೌರಸಭೆಯ ಆರೋಗ್ಯಾಧಿಕಾರಿಯವರಾದ ಶ್ರೀ ಎಸ್ ಅಣೇಕರ್‌ರವರು ತಿಳಿಸಿರುವರು

ತೇವಣಿ ಹಣ ವಾಪಸು ಬಂದಿಲ್ಲ !

ಜಾಬಲ್ಪುರದಲ್ಲಿ 1952 ರಲ್ಲಿ ನಡೆದ ಮುನಿಸಿಪಲ್ ಚುನಾವಣೆಯಲ್ಲಿನ ಒಬ್ಬ ಸ್ಪರ್ಧಿಯು 50 ರೂಪಾಯಿ ಡಿಪಾಜಿಟ್ಟು ಅನೇಕ ಸಾರಿ ಒತ್ತಾಯ ಮಾಡಿದರೂ ಇನ್ನೂ ವಾಪಸ್ಸು ಮಾಡಲ್ಪಟ್ಟಿಲ್ಲ ; ಈ ಚುನಾವಣೆಯೂ ನಡೆದು ಹೋಯಿತು : ಆ ಅಭ್ಯರ್ಥಿಯಾದರೂ 8 ವರ್ಷಗಳಾದರೂ ಇನ್ನೂ ವಾಪಸ್ಸು ಮಾಡಲ್ಪಡದಿರುವ ತನ್ನ ಹಣಕ್ಕೆ ಮತ್ತೆ ರಿಮೈಂಡರು ಕಳುಹಿಸಿ, ಇನ್ನಾದರೂ ಮುನಿಸಿಪಾಲಿಟಿಯವರು ಸೂಕ್ತ ಕಾರ್ಯಕ್ರಮ ಕೈಕೊಳ್ಳುವರೆಂದು ನಂಬಿ ನಿರೀಕ್ಷಿಸಿದ್ದಾನೆ !

ನಾಳೆಯ ಪಂಚಾಂಗ

ಆ॥ ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣಜೋಯಿಸರಿಂದ

10 ಶಂಜಮಿ ಪುಬ್ಬ

ಲೋಹಿಯಾರವರ ಹೇಳಿಕೆ

ಬೊಂಬಾಯಿ 6— ಸೋಷಲಿಸ್ಟ್ ನಾಯಕ ಡಾ || ಲೋಹಿಯಾರವರು ಸಾರ್ವಜನಿಕ ಮೀಟಿಂಗಿನಲ್ಲಿ ಭಾಷಣಮಾಡುತ್ತಾ— ತಮ್ಮ ಪಾರ್ಟಿಯು ಕಾನೂನು ಭಂಗ ಚಳವಳಿಯು ರಾಷ್ಟ್ರೀಯ ಸಮಸ್ಯೆಗಳ ವಿಷಯದಲ್ಲೇ ಹೊರತು, ಪಂಜಾಬಿನ ಹಿಂದಿ ರಕ್ಷಿಸಿ ಚಳವಳಿಯಂತೆಯೂ, ಬೊಂಬಾಯಿನ ದ್ವಿಭಾಷಾ ರಾಜ್ಯ ವಿರುದ್ಧ ಚಳವಳಿಯಂತೆ ಸ್ಥಳೀಯ ಚಳವಳಿಯಲ್ಲವೆಂದು ಹೇಳಿದರು.

ಮುನಿಸಿಪಲ್ ಕಮೀಷನರ್‌ರವರ ಆಫೀಸು
ಸಿಟಿ ಮುನಿಸಿಪಾಲಿಟಿ

ಮೈಸೂರು, ತಾ 6-1-58

R8 S 35, 36, 37, 38/57-58

ನೋಟಿಫಿಕೇಷನ್

1958 ನೆ ಏಪ್ರಿಲ್ 1 ನೇ ತಾರೀಖು ಆಗಾಯುಕ್ತ 59 ನೇ ಮಾರ್ಚಿ ಅಖೈರ್ ವರೆಗೆ, ಈ ಕೆಳಗೆ ನಮೂದಿಸಿರುವ ಬಾಬುಗಳನ್ನು ಹರಾಜು ಇಸ್ತಿಹಾರ್ ಹರತ್ತುಗಳಿಗೆ ಬಹಿರಂಗವಾಗಿ ತಾ 13-1-58 ನೇ ಸೋಮವಾರ ದಿವಿ 10 ಘಂಟೆ ಅಲಂಗಾಯ್ತು ದೇವರಾಜ ಮಾರ್ಕೆಟ್ ಡೈಲಿ ಫೀ ಆವರಣದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಏಲಿಪಡಿಸಲಾಗುತ್ತೆ. ಇಷ್ಟ ವುಳ್ಳವರು ಸಕಾಲಕ್ಕೆ ಹಾಜರಾಗಿ ಭಡ ಸವಾಲು ಮೂಲಕ ಪಡೆಯಬಹುದು. ವಿವರಗಳನ್ನು ಆಫೀಸು ವೇಳೆಯಲ್ಲಿ ತಿಳಿಯಬಹುದು.

1) ದೇವರಾಜ ಮಾರ್ಕೆಟ್ಟಿಗೆ ಬರುವ ತರಕಾರಿ ಗೂಡೆ ವಗೈರೆಗಳ ಮೇಲೆ ಡೈಲಿ ಫೀ ವಸೂಲು ಮಾಡುವ ಹಕ್ಕು : ದಿವಿ 10 ಘಂಟೆಗೆ.

2) ದೇವರಾಜ ಮಾರ್ಕೆಟ್ ಸೈಕಲ್ ಸ್ಟ್ಯಾಂಡಿನಲ್ಲಿ ಒಂದು ನಿಲ್ಲುವ ಸೈಕಲ್‌ಗಳ ಮೇಲೆ ಡೈಲಿ ಫೀ ವಸೂಲು ಮಾಡುವ ಹಕ್ಕು : ದಿವಿ 10-30 ಘಂಟೆಗೆ

3) ದೇವರಾಜ ಮಾರ್ಕೆಟ್ಟಿಗೆ ಸೇರಿದ ಹೋಲ್‌ಸೇಲ್ ವೆಜಿಟಬಲ್ ಯಾರ್ಡ್ ಜಾಗದಲ್ಲಿ ದಿನವಹಿ ಬರುವ ತರಕಾರಿಯನ್ನು ಹರಾಜು ಹಾಕುವ ಮತ್ತು ಕವಿಷ್ಠ ವಸೂಲ್ಮಾಡುವ ಹಕ್ಕು : ದಿವಿ 11 ಘಂಟೆಗೆ.

4) ದೇವರಾಜ ಮಾರ್ಕೆಟ್ಟಿನಲ್ಲಿ ದಿನವಹಿ ಶೇಖರಿಸಲ್ಪಟ್ಟ ಕಚರ (Rubbish) ವನ್ನು ಪ್ರತಿದಿನ ತಾಗಿಸಿಕೊಂಡು ಹೋಗುವ ಹಕ್ಕು ; ದಿವಿ 11-30 ಘಂಟೆಗೆ.

(Sd) Mahamad Vazeer Ahamad
Municipal Commissioner

ಜೆನ್ನಾ ಚಿತ್ರವಿರುವದಕ್ಕೆ ಪ್ರತಿಭಟನೆ

ಪಾಕಿಸ್ತಾನದ ಸ್ಟೇಟ್ ಬ್ಯಾಂಕಿನವರು ಪಾಕಿಸ್ತಾನ ಸ್ಥಾಪಕರಾದ ಕ್ವಯಿದ್ ಇ ಅಜಾಂ ಜಿನ್ನಾರವರ 82 ನೇ ವಾರ್ಷಿಕೋತ್ಸವದ ನೆನೆಪಿಗಾಗಿ ಜಿನ್ನಾರವರ ಚಿತ್ರವುಳ್ಳ 100 ರೂಪಾಯಿಗಳ ನೋಟುಗಳನ್ನು ಪ್ರಕಟಿಸಿದರು — ಇದಕ್ಕೆ ಪ್ರಬಲರಾದ ಮೌಲ್ವಿ ಮತ್ತು ಮುಲ್ಲಾಗಳು ತೀವ್ರವಾಗಿ ಪ್ರತಿಭಟಿಸಿ ನೋಟುಗಳನ್ನು ವಾಪಸ್ಸು ಪಡೆಯಲು ಒತ್ತಾಯ ಪಡಿಸುತ್ತಿದ್ದಾರೆ !

ಅಪೆರಾ— ಜಯಪ್ರದ 3 ನೇ ವಾರ

ಮಾಯಾಬಜಾರ್

ಎಸ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಲೇಲಂಗಿ ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

SHAKTI
SUDHA
A Superb Tonic

ವುಡ್‌ಲ್ಯಾಂಡ್
ಶಿನ್
10—1—58 ರಿಂದ
ಅಮೋಘ ಪ್ರಾರಂಭ
ದೇವಾನಂದ್ — ಕಲ್ಪನಾ ಕಾರ್ತಿಕ್
ಶಶಿಕಲಾ ನಾಟ್ಯವಹಿಸಿರುವ
ನೌ ದೊ ಗ್ಯಾರ
ಶಿ
Nau Do Gyara
ಅತ್ಯಮೋಘ ಹಿಂದಿ ಚಿತ್ರ
ದಿನವಹಿ 3 ಪ್ರದರ್ಶನಗಳು

ಉಮಾ ಟಾಕೀಸ್
10—1—58 ರಿಂದ
ಗುಣಸುಂದರಿ
(ತಮಿಳು)
ನಟವರ್ಗ— ಸಾವಿತ್ರಿ, ಜಮಿನಿ ಗಣೇಶ್ ಸಂಬಿಯಾರ್, ಅಂಗರಾವ್, ಕರುಣಾನಿಧಿ
[ಪ್ರತಿದಿನ 3 ಆಟಗಳು]

ಗೋ ಸಂರಕ್ಷಣೆ ಮಾಡಿ
Protect the cow

Edited, Printed & Published by Dharma Prachara Nirata M S Krishna Rao at the Satyavadi Press Chamrajpuram Myrore